ಅನುದಾನ ಬಿಡುಗಡೆಯಾಗಿರುತ್ತದೆ. ಅದೇ ರೀತಿ ಕಾಮಗಾರಿಗಳ ಬಗ್ಗೆ ಮತ್ತೊಂದು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಇದುವರೆವಿಗೂ ಕೂಡ ಯಾವುದೇ ಕಾಮಗಾರಿಗಳನ್ನು ಕೈಗೊಂಡಿಲ್ಲ. ಮಾನ್ಯ ಸಚಿವರು 7.4 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ ಎಂದು ಹೇಳಿದ್ದಾರೆ. ಜಿಲ್ಲಾಧಿಕಾರಿಗಳು ತಪ್ಪು ಮಾಹಿತಿಯನ್ನು ನೀಡಿರುತ್ತಾರೆ. ಅಲ್ಲಿ ಇಲ್ಲಿಯವರೆವಿಗೂ ಯಾವುದೇ ಕಾಮಗಾರಿಗಳನ್ನು ಕೈಗೊಂಡಿಲ್ಲ.

ಶ್ರೀ ಜಿ. ಕರುಣಾಕರರೆಡ್ಡಿ :- ಮಾನ್ಯ ಅಧ್ಯಕ್ಷರೇ, ಜಿಲ್ಲಾಧಿಕಾರಿಗಳು ತಪ್ಪು ಮಾಹಿತಿಯನ್ನು ನೀಡಿದ್ದು, ಅಲ್ಲಿ ಯಾವುದೇ ಕಾಮಗಾರಿಗಳನ್ನು ಕೈಗೊಂಡಿಲ್ಲವೆಂದು ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ತಕ್ಷಣವೇ ಸೂಚನೆಯನ್ನು ಕೊಡುತ್ತೇನೆ. ಆ ತಾಲ್ಲೂಕಿನಲ್ಲಿ ಏನು ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ಪ್ರಸ್ತಾಪಿಸಲಾಗಿದೆ, ಅದನ್ನು ತಕ್ಷಣ ಕೈಗೊಳ್ಳಬೇಕೆಂದು ಸೂಚಿಸುತ್ತೇನೆ.

ಆ) ವಿಷಯ :- 2006-07, 2007-08 ಮತ್ತು 2008-09ನೇ ಸಾಲಿನ ಆಯವ್ಯಯದಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳಲ್ಲಿ ಸರ್ಕಾರ ವಿವಿಧ ಇಲಾಖೆಗಳಿಗೆ ಮಂಜೂರು ಮಾಡಿರುವ ಹಣ, ಬಿಡುಗಡೆ ಮಾಡಿರುವ ಹಣ, ಖರ್ಚಾಗಿರುವ ಮತ್ತು ಉಳಿತಾಯವಾಗಿರುವ ಹಣದ ಬಗ್ಗೆ.

ಶ್ರೀ ಆರ್. ಧ್ರುವನಾರಾಯಣ್ (ಕೊಳ್ಳೇಗಾಲ) :- ಮಾನ್ಯ ಅಧ್ಯಕ್ಷರೇ, 2006-07, 2007-08 ಮತ್ತು 2008-09ನೇ ಸಾಲಿನ ಆಯವ್ಯಯದಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಗಳಲ್ಲಿ ಸರ್ಕಾರ ವಿವಿಧ ಇಲಾಖೆಗಳಿಗೆ ಮಂಜೂರು ಮಾಡಿರುವ ಹಣ, ಬಿಡುಗಡೆ ಮಾಡಿರುವ ಹಣ, ಖರ್ಚಾಗಿರುವ ಮತ್ತು ಉಳಿತಾಯವಾಗಿರುವ ಹಣದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಡಾ॥ ಬಿ.ಎಸ್. ಯಡಿಯೂರಪ್ಪ (ಸಮಾಜ ಕಲ್ಯಾಣ ಸಚಿವರ ಪರವಾಗಿ) :- ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿಯನ್ನು ಪಡೆದು ಈ ಉತ್ತರವನ್ನು ನೀಡಬಯಸುತ್ತೇನೆ.

ರಾಜ್ಯದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ ಅಡಿ ವಿವಿಧ ಅಭಿವೃದ್ಧಿ ಇಲಾಖೆಗಳ ಮೂಲಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಅನುಷ್ಠಾನ ಮಾಡಲಾಗುತ್ತಿದೆ. 2006-07, 2007-08 ಮತ್ತು

2008-09ನೇ ವರ್ಷಗಳಲ್ಲಿ ಉಲ್ಲೇಖಿತ ಯೋಜನೆಗೆ ಒದಗಿಸಿರುವ, ಬಿಡುಗಡೆಯಾದ, ಖರ್ಚಾದ ಹಾಗೂ ಉಳಿತಾಯವಾದ ಅನುದಾನದ ವಿವರ ಈ ಕೆಳಕಂಡಂತಿದೆ.

ಪರಿಶಿಷ್ಟ ಜಾತಿ ಉಪಯೋಜನೆ (ಎಸ್.ಸಿ.ಎಸ್.ಪಿ)

ರೂ.ಲಕ್ಷಗಳಲ್ಲಿ

ವರ್ಷ	ನಿಗದಿಪಡಿಸಿದ ಅನುದಾನ	ಬಿಡುಗಡೆ	ಖರ್ಚು	ಉಳಿಕೆ
2006-07	145783.21	140087.23	140087.23	5695.98
2007-08	291467.79	198261.90	198261.90	93205.89
2008-09	323243.77	81128.30	81128.30 (ನವೆಂಬರ್ 2008ರ ವರೆಗೆ)	242115.48

ಪರಿಶಿಷ್ಟ ಪಂಗಡ ಉಪಯೋಜನೆ (ಟಿ.ಎಸ್.ಪಿ)

ರೂ.ಲಕ್ಷಗಳಲ್ಲಿ

ವರ್ಷ	ನಿಗದಿಪಡಿಸಿದ ಅನುದಾನ	ಬಿಡುಗಡೆ	ಖರ್ಚು	ಉಳಿಕೆ
2006-07	48216.81	47868.69	47515.04	701.77
2007-08	116087.63	79605.33	79605.33	36482.30
2008-09	126389.08	35060.48	35060.48 (ಡಿಸೆಂಬರ್ 2008ರ ವರೆಗೆ)	91328.60

ಭಾರತ ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ಯೋಜನಾ ಇಲಾಖೆಯು ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಜನಸಂಖ್ಯೆ ಆಧಾರದ ಮೇಲೆ ಕ್ರಮವಾಗಿ ಶೇ.16.20 ಹಾಗೂ ಶೇ.6.55 ರಂತೆ ಅನುದಾನ ನಿಗದಿಪಡಿಸಿರುತ್ತದೆ.

ಈ ಯೋಜನೆ ಅಡಿ ವಿವಿಧ ಇಲಾಖೆಗಳು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದ್ದು ಅನುಷ್ಠಾನ ಅಧಿಕಾರಿಗಳಿಗೆ ಹಣ ಬಿಡುಗಡೆ ಮಾಡಲಾಗುತ್ತಿದೆ. ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ ಗೆ ನಿಗದಿಪಡಿಸಿದ ಅನುದಾನವನ್ನು ಆಯಾ ಇಲಾಖೆಗಳು ಖರ್ಚು ಮಾಡಬೇಕಾಗಿರುತ್ತದೆ. ಸಮಾಜ ಕಲ್ಯಾಣ ಇಲಾಖೆಯಿಂದ ಪ್ರತಿ ತಿಂಗಳು ಪ್ರಗತಿಯನ್ನು ಪರಿಶೀಲಿಸಲಾಗುತ್ತಿದೆ.

ಡಾ॥ ಬಿ.ಎಸ್. ಯಡಿಯೂರಪ್ಪ :- ಕಳೆದ ಮೂರು ವರ್ಷಕ್ಕೆ ಹೋಲಿಕೆ ಮಾಡಿದರೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಜನರಿಗೆ ಈ ಯೋಜನೆಯಲ್ಲಿ 19,000 ಕೋಟಿ ರೂಪಾಯಿ ಅತ್ಯಂತ ಹೆಚ್ಚಿನ ಹಣವನ್ನು ಬಜೆಟ್‌ನಲ್ಲಿ ತೆಗೆದು ಇಟ್ಟಿದ್ದೇವೆ. ನವೆಂಬರ್ 2008ರವರೆಗೆ ಪರಿಶಿಷ್ಟ ಜನಾಂಗಕ್ಕೆ ಹಾಗೂ ಡಿಸೆಂಬರ್ 2008ರ ವರೆಗೆ ಪರಿಶಿಷ್ಟ ಪಂಗಡಕ್ಕೆ ಎಷ್ಟು ಹಣ ಖರ್ಚಾಗಿದೆ ಎಂದು ಹೇಳಿದ್ದೇನೆ. ಉಳಿದಂತಹ ಹಣವನ್ನು ಬರುವಂತಹ ದಿನಗಳಲ್ಲಿ ಹೆಚ್ಚು ಖರ್ಚು ಮಾಡುವುದಕ್ಕೆ ಶಕ್ತಿ ಮೀರಿ ಪ್ರಾಮಾಣಿಕ ಪ್ರಯತ್ನವನ್ನು ಮಾಡುವುದಕ್ಕೆ ಈಗಾಗಲೇ review meeting ಮಾಡಿ ಸೂಚನೆಯನ್ನು ಕೊಟ್ಟಿದ್ದೇವೆ. ಈ ವರ್ಗಕ್ಕೆ ತೆಗೆದಿಟ್ಟಿರುವ ಹಣ ಖರ್ಚು ಮಾಡಬೇಕೆನ್ನುವುದು ನಮ್ಮ ಅಪೇಕ್ಷೆ ಇದೆ. ಈ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಆರ್. ಧ್ರುವನಾರಾಯಣ್ :- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. 2006-07ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭಿವೃದ್ಧಿ ಯೋಜನೆಗೋಸ್ಕರ 1,457 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದಾರೆ, ಅದರಲ್ಲಿ 1,400 ಕೋಟಿ ರೂಪಾಯಿ ಖರ್ಚಾಗಿದೆ. ಇನ್ನು ಉಳಿದಂತಹ 56 ಕೋಟಿ ರೂಪಾಯಿ ಹಣ ಖರ್ಚಾಗಿಲ್ಲ. 2007-08ರಲ್ಲಿ 2,914 ಕೋಟಿ ರೂಪಾಯಿ ಅನುದಾನವನ್ನು ಒದಗಿಸಿದ್ದಾರೆ, ಅದರಲ್ಲಿ 1,982 ಕೋಟಿ ರೂಪಾಯಿ ಬಿಡುಗಡೆಯಾಗಿದೆ. ಆದರೆ ಸುಮಾರು 932 ಕೋಟಿ ರೂಪಾಯಿ ಹಣ ಉಳಿಕೆಯಾಗಿದೆ. ಬಹಳಷ್ಟು ಇಲಾಖೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಈ ಹಣವನ್ನು ಬಳಕೆ ಮಾಡದೇ ಆಗಬೇಕಾಗಿರುವಂತ ಕಾರ್ಯಕ್ರಮಗಳು ಸರಿಯಾದ ರೀತಿಯಲ್ಲಿ ಆಗಿಲ್ಲ. ಇದರಲ್ಲಿ ಉದಾಹರಣೆಗೆ Industries and Commerce Department, Technical Education Department, Tourism Department, Rural

Water Supply Department, Transport Department, KPTCL, PWD, Women and Child Development Department, Urban Development Department, Health and Family welfare Department, ಈ ಇಲಾಖೆಗಳಿಗೆ ಒದಗಿಸಿರತಕ್ಕಂಥ ಹಣವನ್ನು ಇಲಾಖೆಗಳವರು ಈ ವರ್ಗದ ಜನರಿಗೆ ಕಾರ್ಯಕ್ರಮವನ್ನು ರೂಪಿಸಿ ಅವರಿಗೆ ಕೊಡುವುದಕ್ಕಾಗಿಲ್ಲ. ಹೀಗಾಗಿ 2007-08ರಲ್ಲಿ ಸುಮಾರು 932 ಕೋಟಿ ರೂಪಾಯಿ ಉಳಿಕೆಯಾಗಿದೆ. ಈ ಹಣ ನಿಜವಾಗಿ ಕೂಡ ಸದ್ಬಳಕೆ ಆಗಿದ್ದರೆ, ಆ ವರ್ಗದ ಜನರಿಗೆ ಬಹಳಷ್ಟು ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಂಡು ಸಹಾಯ ಮಾಡಬಹುದಿತ್ತು. 2008-09ರಲ್ಲಿ ಕೂಡ ಸುಮಾರು 3,232 ಕೋಟಿ ರೂಪಾಯಿ ಹಣವನ್ನು ಅನುದಾನದಲ್ಲಿ ಒದಗಿಸಿದ್ದಾರೆ. ಅದರಲ್ಲಿ ಬಿಡುಗಡೆಯಾಗಿರತಕ್ಕಂಥಾದ್ದು 811 ಕೋಟಿ ರೂಪಾಯಿ. ಇನ್ನು ಉಳಿಕೆಯಾದಂತಹ ಹಣ 2,421 ಕೋಟಿ ರೂಪಾಯಿ ಇದೆ. ಈಗಾಗಲೇ ಇದು ಜನವರಿ ತಿಂಗಳಾಗಿದೆ. ವರ್ಷದ ಕೊನೆ ತಿಂಗಳಾದ ಮಾರ್ಚ್ ಬರುತ್ತದೆ. ಈ ಎರಡು ತಿಂಗಳಿನಲ್ಲಿ ಈ ಹಣವನ್ನು ಖರ್ಚು ಮಾಡುತ್ತಾರೆಯೇ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಪರಿಶಿಷ್ಟ ಪಂಗಡದಲ್ಲಿ ಕೂಡ ಇದೇ ರೀತಿಯಾಗಿದೆ. ಬಹಳಷ್ಟು ಇಲಾಖೆಗಳಲ್ಲಿ ಒದಗಿಸಿರುವಂತಹ ಹಣವನ್ನು ಈ ಜನರಿಗೆ ಸರಿಯಾದ ರೀತಿಯಲ್ಲಿ ಕಾರ್ಯಕ್ರಮವನ್ನು ರೂಪಿಸಿ, ವಿನಿಯೋಗಿಸುತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಎರಡು ಬಾರಿ review meeting ಮಾಡಿದ್ದೇನೆಂದು ಹೇಳಿದರು. ಕಳೆದ ವರ್ಷ 932 ಕೋಟಿ ರೂಪಾಯಿ ಉಳಿಕೆಯಾಗಿದೆ. ಅದು lapse ಆಗುತ್ತದೆ, carry over ಆಗುವುದಿಲ್ಲ. 2,421 ಕೋಟಿ ರೂಪಾಯಿ ಈ ವರ್ಷ ಖರ್ಚಾಗಬೇಕಾಗಿದೆ. ಅದಕ್ಕೆ ಇನ್ನು ಕೇವಲ ಎರಡೇ ತಿಂಗಳಿದೆ.

ದಯಮಾಡಿ ಇದನ್ನು ಇನ್ನೂ ಹಲವಾರು ಬಾರಿ ರಿವ್ಯೂ ಮಾಡಿ. ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಕಲ್ಯಾಣಕ್ಕೋಸ್ಕರ ಒದಗಿಸಿರುವಂಥ ಹಣ ಸರಿಯಾದ ರೀತಿಯಲ್ಲಿ ವಿನಿಯೋಗವಾಗಬೇಕೆಂಬುದು ನನ್ನ ಒಂದು ಮನವಿ ಯಾಗಿದೆ. ಇದರ ಜೊತೆಗೆ ಮಹಾರಾಷ್ಟ್ರ ಸರ್ಕಾರದಲ್ಲಿ ಒಂದು ಮಾದರಿ ಇದೆ. ಇಲ್ಲಿ ಎರಡು Single Window System ಎಂದು ಸಮಾಜ ಕಲ್ಯಾಣ ಇಲಾಖೆಯವರಿಗೆ total budgetary allocation 18% ಅನ್ನು ಆ ಇಲಾಖೆಗೆ ಒದಗಿಸಿ, ತನ್ಮೂಲಕ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳುವಂಥ

ಒಂದು system ಅನ್ನು ಮಹಾರಾಷ್ಟ್ರ ಸರ್ಕಾರ ತಂದಿದೆ. ದಯಮಾಡಿ ನಮ್ಮ ರಾಜ್ಯದಲ್ಲೂ ಆ ಮಾದರಿಯನ್ನು ತಂದರೆ ಬಹಳ ಒಳ್ಳೆಯದು. ಇನ್ನು ಕಳೆದ ವರ್ಷ 932 ಕೋಟಿ ರೂಪಾಯಿಗಳು ಖರ್ಚು ಆಗಿಲ್ಲ, ಮತ್ತೆ ಈ ವರ್ಷವೂ ಕೂಡ 2,421 ಕೋಟಿ ರೂಪಾಯಿಗಳು ಉಳಿಕೆ ಹಣ ಏನು ಇದೆ. ಅದನ್ನು ತತ್‌ತಕ್ಷಣ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು ಈ ಹಣ ಸದ್ಬಳಕೆಯಾಗುವಂತೆ ಮಾಡಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಅನುಕೂಲವನ್ನು ಮಾಡಿಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ :- ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು :- ಮಾನ್ಯ ಶಿವಕುಮಾರ್‌ರವರೆ, ಇದು ಗಮನ ಸೆಳೆಯುವ ಸೂಚನೆಯಾಗಿದೆ. ಇದರ ಮೇಲೆ ಸ್ಪಷ್ಟಿಕರಣ ಕೇಳುವಂಥಾದ್ದು ಅಷ್ಟೆ. ಇಲ್ಲಿ ಯಾರು ಗಮನ ಸೆಳೆಯುವ ಸೂಚನೆಗೆ ನೋಟೀಸ್ ಕೊಟ್ಟಿರುತ್ತಾರೆ. ಅವರಿಗಷ್ಟೆ ಮಾತನಾಡುವುದಕ್ಕೆ ಅವಕಾಶವಿರುವಂಥಾದ್ದು. ಈಗ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟರೆ ಮತ್ತೆ ಚರ್ಚೆ ಆಗುತ್ತದೆ. ಮಾನ್ಯ ಧ್ರುವನಾರಾಯಣ್‌ರವರು ಸರಿಯಾಗಿ ಸ್ಪಷ್ಟಿಕರಣವನ್ನು ಕೇಳಿದ್ದಾರೆ.

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ :- ಮಾನ್ಯ ಅಧ್ಯಕ್ಷರೆ, ಇದನ್ನು ನಿಯಮ 69ಕ್ಕೆ convert ಮಾಡಿ ಕೊಡಿ.

ಶ್ರೀ ಡಿ.ಕೆ. ಶಿವಕುಮಾರ್ :- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಕ್ಕೆ ಉತ್ತರವನ್ನು ಕೊಡಲು ನಿಂತಿರುವುದು ಬಹಳ ಸಂತೋಷ. ನಾನು ಗೌರವಾನ್ವಿತ ಮುಖ್ಯಮಂತ್ರಿಯವರಿಗೆ ಹೇಳುವುದೆನೆಂದರೆ, ಈ ವಿಚಾರದಲ್ಲಿ ಹರಿಜನ, ಗಿರಿಜನರಿಗೆ ಹಣವನ್ನು ಖರ್ಚು ಮಾಡುವಂಥ ಸಂದರ್ಭದಲ್ಲಿ ಯಾವುದೇ ಪಕ್ಷಕ್ಕೆ, ಸರ್ಕಾರಕ್ಕೆ ಒಂದು ರಾಜಕೀಯ ಬದ್ಧತೆ ಇರಬೇಕು. ಇವತ್ತು 20% ಕೂಡ ಹಣ ಖರ್ಚು ಆಗಿಲ್ಲ. ಇದು ಸಾವಿರಾರು ಕೋಟಿ ರೂಪಾಯಿಗಳೆಂದು ಹೇಳುತ್ತಾರೆ. ನನ್ನ ಪ್ರಕಾರ 242 ಕೋಟಿ ರೂಪಾಯಿಗಳನ್ನು ಒಂದು ವರ್ಗಕ್ಕೆ ಖರ್ಚು ಮಾಡಬೇಕಾಗುತ್ತದೆ. ಇನ್ನೊಂದು ವರ್ಗಕ್ಕೆ 91 ಕೋಟಿ 913 ಲಕ್ಷ ರೂಪಾಯಿಗಳು ಬರುತ್ತದೆ. ಆದರೆ officers ಅನ್ನು ಇಲ್ಲಿ posting ಮಾಡುವಾಗ ಆಸಕ್ತಿ ಇರುವ ಜನರಿಗೆ ನೀವು ಏನಾದರೂ ಮಾಡಿ ಯಾರಿಗಾದರೂ ಜವಾಬ್ದಾರಿಯನ್ನು ಫಿಕ್ಸ್ ಮಾಡಬೇಕು. ಇಲ್ಲಿ ಈ ಹಣವನ್ನು ಖರ್ಚು ಮಾಡುವುದಕ್ಕೆ

ಆಗಲಿಲ್ಲವೆಂದ ಮೇಲೆ, ಈ ಶೋಷಿತ ವರ್ಗದವರ ಬಗ್ಗೆ ನೀವು ಚಿಂತನೆ ಮಾಡುವುದಕ್ಕೆ ಆಗಲಿಲ್ಲವೆಂದರೆ ಯಾವ ಸರ್ಕಾರ ಕೂಡ ಈ ಜನರನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಯವರು ಒಂದು plan of action ಅನ್ನು ಇಲ್ಲಿ ಇಡಬೇಕು. ಇದು ಇಷ್ಟು ದಿವಸಗಳಲ್ಲಿ ಎಂದು ಆಗಬೇಕು, ಏಕೆಂದರೆ 20% ಆಗಿಲ್ಲವೆಂದರೆ ನೀವು ಬೇರೆ department ಗಳನ್ನು ಬಿಡಿ. ಇಲ್ಲಿ ಈ ವರ್ಗದವರಿಗೆ Central Government ಹಣವನ್ನು ಕೊಡುತ್ತದೆ. ತಾವು ಹಣವನ್ನು ಕೊಡುತ್ತೀರಿ. ಇಲ್ಲಿ ಸಾಕಷ್ಟು ಅವಕಾಶಗಳು ಇವೆ. ದಯವಿಟ್ಟು ತಾವು ಇದಕ್ಕೆ date fix ಮಾಡಿ, officersಗೆ ನೀವು responsibility fix ಮಾಡಿ. ನಿಮ್ಮ ಮಂತ್ರಿಯವರಿಗೆ responsibility fix ಮಾಡಿ. ಅವರನ್ನು ತಾಲ್ಲೂಕು, ತಾಲ್ಲೂಕುಗಳಿಗೆ ಹೋಗಿ ಕೇಳುವುದಕ್ಕೆ ಕಳುಹಿಸಿ. ನಿಮ್ಮ ಮಂತ್ರಿಯವರು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಕಾಣುತ್ತದೆ. ಅವರು ತಾಲ್ಲೂಕು, ತಾಲ್ಲೂಕುಗಳಿಗೂ ಬಂದು review ಮಾಡಿ, ಇಲ್ಲಿ ಎಷ್ಟು ಹಣ ಖರ್ಚು ಆಗಿದೆ ಯಾರು ಮಾಡಿದ್ದಾರೆ ಯಾರು ತಪ್ಪು ಮಾಡಿದ್ದಾರೆ ಎಂಬ ಕೆಲಸವನ್ನು ತಾವು ಮಾಡಬೇಕಾಗುತ್ತದೆ. ದಯವಿಟ್ಟು ಇದಕ್ಕೆ ಉತ್ತರ ಹೇಳಬೇಕು.

ಶ್ರೀ ಹೆಚ್.ಕೆ. ಕುಮಾರಸ್ವಾಮಿ :- ಮಾನ್ಯ ಅಧ್ಯಕ್ಷರೆ, ಇಲ್ಲಿ ಮಾನ್ಯ ಮುಖ್ಯಮಂತ್ರಿಯವರ ವರದಿ ಆಧಾರದ ಮೇಲೆಯೇ ಶೇ.23 ರಷ್ಟು ಹಣ ಖರ್ಚು ಆಗಿದೆಯೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಇದರಿಂದ ಏನು ಧೃಡವಾಗುತ್ತದೆಂದರೆ ಯಾವುದೇ ಸರ್ಕಾರ ಬರೀ ಹಣವನ್ನು ನಿಗದಿಪಡಿಸುವುದರಿಂದ ಆ ಜನಾಂಗಗಳ ಉದ್ಧಾರವಾಗುವುದಿಲ್ಲವೆಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಬರೀ ಹಣವನ್ನು ನಿಗದಿ ಮಾಡುವುದಲ್ಲ, ಹಣವನ್ನು ಎಷ್ಟು ಬಿಡುಗಡೆ ಮಾಡುತ್ತೇವೆ? ಬಿಡುಗಡೆಯಾದ ಹಣದಲ್ಲಿ ಎಷ್ಟು ಹಣವನ್ನು ಖರ್ಚು ಮಾಡುತ್ತೇವೆ? ಖರ್ಚು ಮಾಡಿದ ಹಣದಲ್ಲಿ ಎಷ್ಟು ಜನರಿಗೆ ಅದು ತಲುಪಿದೆ? ಅದರಿಂದ ಎಷ್ಟು ಅನುಕೂಲವಾಗಿದೆ? ಯಾವ್ಯಾವ ಜಿಲ್ಲೆಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆ? ಯಾವ್ಯಾವ ಕ್ಷೇತ್ರಗಳಿಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆ? ಇದರಲ್ಲಿ ನನಗನಿಸುವಂಥಾದ್ದು ಸಾಮಾಜಿಕ ಕಳಕಳಿ ಇಲ್ಲದೇ ಇರುವಂಥ ಅಧಿಕಾರಿಗಳು ಈ ಇಲಾಖೆಗಳಲ್ಲಿದ್ದರೆ ಈ ರೀತಿಯ ಕೆಲಸಗಳಾಗುತ್ತವೆ. ಇದರ ಜೊತೆಗೆ ಮಾನ್ಯ ಸಭಾಧ್ಯಕ್ಷರೆ, ಇಲ್ಲಿ ಕೊಟ್ಟಿರುವ ಹೇಳಿಕೆಯಲ್ಲಿ ನೋಡಿದರೆ ಕೇವಲ 811 ಕೋಟಿ ರೂಪಾಯಿಗಳು ಖರ್ಚು ಆಗಿದೆ. ಈಗಾಗಲೇ ಇವತ್ತು ಜನವರಿ 20ನೇ ತಾರೀಖು ಆಯಿತು. ಇವರು ಮಾರ್ಚ್ 15ನೇ

ತಾರೀಖಿಗೆ progress report ಅನ್ನು ತೋರಿಸಬೇಕು. ಇವರು ಈ ಹಣವನ್ನು ಯಾವಾಗ ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆ? ಇದಕ್ಕೆ ಮೂಲ ಕಾರಣ ಮಾನ್ಯ ಮುಖ್ಯಮಂತ್ರಿಯವರೆ ಆರ್ಥಿಕ ಸಚಿವರಾಗಿದ್ದಾರೆ. ಈ ಹಣವನ್ನು ಆರ್ಥಿಕ ಇಲಾಖೆಯವರು ಅನೇಕ ರೀತಿ query ಹಾಕಿ, ಮಾರ್ಚ್ ತಿಂಗಳು ಬರುವವರೆಗೂ ಹಣವನ್ನು ಬಿಡುಗಡೆ ಮಾಡುವುದಿಲ್ಲ. ಇದರಲ್ಲಿ ಆರ್ಥಿಕ ಇಲಾಖೆಯವರ ಜವಾಬ್ದಾರಿ ಕೂಡ ಇದೆ. ಈ ಇಲಾಖೆಯವರು ಹಣವನ್ನು ಬಿಡುಗಡೆ ಮಾಡುವುದಿಲ್ಲ. ಈ SCP ಹಣಕ್ಕೆ ಇಲ್ಲದ ಅಡೆತಡೆಗಳನ್ನು ಮಾಡಿ, ಇಲ್ಲದೇ ಇರುವ query ಹಾಕಿ, ಮಾನ್ಯ ಮುಖ್ಯಮಂತ್ರಿಯವರೆ, ಇಲ್ಲಿ ಮಾರ್ಚ್ ತಿಂಗಳವರೆಗೂ ಹೋರಾಟ ಮಾಡಿದ ಮೇಲೆ ಹಣ ಬಿಡುಗಡೆಯಾಗುತ್ತದೆ. ಇಲ್ಲಿ ಹಿನ್ನಡೆಯಗುವುದಕ್ಕೆ ಇದು ಒಂದು ಮೂಲ ಕಾರಣವಿದೆ. ನಮ್ಮ ಅಧಿಕಾರಿಗಳು Principle Secretary ಯಾರು ಇದ್ದಾರೆ, Deputy Secretary ಯಾರು ಇದ್ದಾರೆ. ದಯಮಾಡಿ ತಾವು ಅವರನ್ನು ಬೇಕಾದರೆ ಕೇಳಿ. ಇದು ಸಹ ಮೂಲ ಕಾರಣವಿದೆ. ಇದಕ್ಕೆ ಕಾಲಮಿತಿ ಕಾರ್ಯಕ್ರಮವನ್ನು ಹಾಕಿಕೊಂಡು, ಹಾಗಾಗ್ಗೆ ಸಭೆಗಳನ್ನು ಮಾಡಿ ಈ ಹಣವನ್ನು ಖರ್ಚು ಮಾಡುವಂಥಾದ್ದನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಡಾ॥ ಹೆಚ್.ಸಿ. ಮಹದೇವಪ್ಪ :- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಯವರು SCP ಹಣದ ಬಿಡುಗಡೆ ಮತ್ತು ಅದರ ಉಪಯೋಗದ ಬಗ್ಗೆ ಸಂಪೂರ್ಣವಾದಂಥ ಮಾಹಿತಿಯನ್ನು ಸದನಕ್ಕೆ ಕೊಟ್ಟಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಯವರು ಹಣಕಾಸಿನ ಸಚಿವರಾಗಿರುವಂಥ ಸಂದರ್ಭದಲ್ಲಿ ಕಳೆದ ಬಜೆಟ್ ಆದಂಥ ಸನ್ನಿವೇಶದಲ್ಲಿ ರಿಸರ್ವ್ ಕ್ಷೇತ್ರದಿಂದ ಬಂದಿರುವಂಥ ಬಹುತೇಕ ಎಲ್ಲಾ ಪ್ರತಿನಿಧಿಗಳು ಸಭೆ ಸೇರಿ ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿ, ಕೇಂದ್ರದ ಯೋಜನಾ ಆಯೋಗ ಸೂಚನೆ ಕೊಟ್ಟಿರುವ ರೀತಿಯಲ್ಲಿ ಈ ಜನಸಂಖ್ಯೆಗೆ ಅನುಗುಣವಾಗಿ ಆಯವ್ಯಯದಲ್ಲಿ ಹಣವನ್ನು ಮೀಸಲು ಇಡಬೇಕೆಂದು, ಅಂದರೆ ಅನುಷ್ಠಾನವಾಗಬೇಕೆಂದು ಕಟ್ಟುನಿಟ್ಟಿನ ಸೂಚನೆಯನ್ನು ಎಲ್ಲಾ ರಾಜ್ಯ ಸರ್ಕಾರಗಳು ಕೊಟ್ಟಿವೆ. ಈ ಹಿನ್ನಲೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಬಜೆಟ್ ಮಾಡುವಂಥ ಸಂದರ್ಭದಲ್ಲಿ ಕಳೆದ ಬಾರಿ ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕಡಿಮೆ ಹಣವನ್ನು ಇಟ್ಟಿದ್ದರು. ನಾವು ಮಾನ್ಯ ಮುಖ್ಯಮಂತ್ರಿಯವರಿಗೆ ಮನವಿಯನ್ನು ಮಾಡಿದಾಗ ಈ SCP ಬಗ್ಗೆ ಆಸಕ್ತಿ ವಹಿಸಿ ಕೆಲಸ ಮಾಡಿಸುತ್ತೇನೆಂದು ಸದನದ

ಒಳಗೆ, ಹೊರಗಡೆ ಪ್ರೀತಿಯನ್ನು, ಸಹಾನುಭೂತಿಯನ್ನು ತೋರಿಸುತ್ತಿದ್ದಾರೆ. ಅದರ ಬಗ್ಗೆ ಏನೂ doubt ಪಡುವುದಿಲ್ಲ. ಆದರೆ 23% ಹಣ ಇಷ್ಟೊಂದು ಹಣ ಖರ್ಚು ಆಗಿದೆ. ಈಗ ಫೆಬ್ರವರಿ 28ಕ್ಕೆ ಮತ್ತೊಂದು ಬಜೆಟ್ ಬರುತ್ತಿದೆ. ಈ ಹಣವನ್ನು ಖರ್ಚು ಮಾಡದೇ ಹೋದರೆ constitutional guaranty ಏನು? SC/STಯವರಿಗೆ fix ಮಾಡುವಂಥಾದ್ದು. ಪುನ: ಒಡಂಬಡಿಕೆಯಾದ ಒಪ್ಪಂದವಾದ ಹಿನ್ನಲೆಯಲ್ಲಿ ಈ ಜನರನ್ನು ಆರ್ಥಿಕವಾಗಿ ಮತ್ತು ಬೇರೆ ಬೇರೆ ವಲಯಗಳಲ್ಲಿ ಮೇಲೆತ್ತುವಂಥಾದ್ದು, ಈಗ stateನಲ್ಲಿ High Power Committee ಒಂದು ಇದೆ. ಇದರಲ್ಲಿ Chief Secretary ಯಿಂದ ಹಿಡಿದು ಸ್ವತ: ಮಾನ್ಯ ಮುಖ್ಯಮಂತ್ರಿಯವರೆ ಇದರ ಅಧ್ಯಕ್ಷರಾಗಿರುತ್ತಾರೆ. ಅಲ್ಲಿ ಎಲ್ಲಾ ಇಲಾಖೆಗಳ ಕಾರ್ಯದರ್ಶಿಗಳು ಬರುತ್ತಾರೆ. ಇದರ ಸಭೆ ಒಂದೂ ಕೂಡ ನಡೆದಿಲ್ಲ. ಈ High Power committee ಪ್ರತಿ ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ಸಭೆಯನ್ನು ನಡೆಸಬೇಕು. High Power Committee Meeting ಒಂದೂ ಕೂಡ as per the special component program, implementation of program pertaining to SC & ST ಆಗಿಲ್ಲ. ಇಲ್ಲಿಯವರೆಗೂ ಈ ಮೀಟಿಂಗ್ ನಡದೇ ಇಲ್ಲ. ಈ ಹಣ ಮುಂದಿನ ವರ್ಷಕ್ಕೆ ಲ್ಯಾಪ್ಸ್ ಆಯಿತೆಂದು ಹೇಳುವುದಕ್ಕಾಗುವುದಿಲ್ಲ. Non-lapsable grant ಆಗಿ ಈ ಹಣವನ್ನು ಇಟ್ಟು ಮತ್ತೆ ಮುಂದಿನ ಬಜೆಟ್‌ನಲ್ಲಿ ಕೆಲಸಕ್ಕೆ ಅನುಗುಣವಾಗಿ ಹಣವನ್ನು ಇಟ್ಟು, ಅವರನ್ನು uplift ಮಾಡದೇ ಇದ್ದರೆ ನಕ್ಸಲಿಸಮ್ ಬಗ್ಗೆ, terrorism ಬಗ್ಗೆ ಮಾತನಾಡಿದರೆ, social, economical imbalance ಒಂದಕ್ಕೊಂದು ತಾಳೆ ಇಲ್ಲದ ರೀತಿಯಲ್ಲಿ ಕೆಲಸ ಮಾಡಿದರೆ ಯಾವ ರೀತಿಯಲ್ಲಿ un-equal subject ಅನ್ನು equal subject ಆಗಿ ಬದಲಾವಣೆ ಮಾಡುವುದು?

(ಗೊಂದಲ)

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ :- ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವಂಥಾದ್ದು ಇಷ್ಟೆ, ಇಲ್ಲಿ 20% ಹಣ ಖರ್ಚು ಆಗಿದೆಯೆನ್ನುವ ಮಾತು ಬೇರೆ. ಅದರೆ ಬಿಡುಗಡೆ ಆಗಿರುವ ಹಣ ಎಷ್ಟೆಂಬುದನ್ನು ನೋಡಿ. ನೀವು 20% ಹಣವನ್ನು ಬಿಡುಗಡೆ ಮಾಡಿ, ಹೆಚ್ಚಿಗೆ ಹಣವನ್ನು ಖರ್ಚು ಮಾಡಿಯೆಂದರೆ ಸಾಧ್ಯವಿದೆಯಾ? ಸರ್ಕಾರ ಹಣವನ್ನು ಬಿಡುಗಡೆ ಮಾಡದೇ

ಇರುವಂಥಾದ್ದನ್ನು ನೋಡಿದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಬಗ್ಗೆ ಏನೂ ಕಾಳಜಿ ಇಲ್ಲವೆಂಬುದನ್ನು ತೋರಿಸುತ್ತದೆ. ನೀವು ಬಜೆಟ್‌ನಲ್ಲಿ 3,000 ಕೋಟಿ ರೂಪಾಯಿಗಳನ್ನು ಇಟ್ಟಿರಬಹುದು. ಆದರೆ ಇಲ್ಲಿಯವರೆಗೂ ಹಣವನ್ನು ಬಿಡುಗಡೆ ಮಾಡಿರುವಂಥಾದ್ದು ಎಷ್ಟು? ನಿಮ್ಮ Finance Department code ಪ್ರಕಾರ every quarterly 1/4 ಹಣವನ್ನು ನೀವು release ಮಾಡಬೇಕಾಗಿತ್ತು. ಇಲ್ಲಿಯವರೆಗೆ ನೀವು 3/4 ಹಣವನ್ನು release ಮಾಡಬೇಕಾಗಿತ್ತು. ಆದರೆ ನೀವು ಒಂದೇ ಒಂದು ಕಂತು ಹಣವನ್ನು ರಿಲೀಜ್ ಮಾಡಿದ್ದೀರಿ. ಅಂದರೆ ಇದು ಏನನ್ನು ತೋರಿಸುತ್ತದೆಂದರೆ ಇದರಲ್ಲಿ ನಾವು ಅಧಿಕಾರಿಗಳನ್ನು ಹೇಗೆ ದೋಷಿಗಳನ್ನಾಗಿ ಮಾಡುವುದು? ಅವರು ಏನು ಹೇಳುತ್ತಾರೆಂದರೆ ನೀವು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ. ಅಷ್ಟು ಹಣವನ್ನು ಖರ್ಚು ಮಾಡಿದ್ದೇವೆಂದು ಹೇಳುತ್ತಾರೆ. ಅಂದರೆ ಈ ಹೊಣೆ ಸರ್ಕಾರದ ಮೇಲೆ ಬರುತ್ತದೆ. ಇವತ್ತು ಮಾನ್ಯ ಮುಖ್ಯಮಂತ್ರಿಯವರು ಹಣಕಾಸಿನ ಸಚಿವರು ಕೂಡ ಆಗಿದ್ದಾರೆ. ಅವರು ಈ 75% ಹಣ ಬಿಡುಗಡೆಯಾಗಿರುವುದನ್ನು ನೋಡಬೇಕಾಗಿತ್ತು. ಹಣವನ್ನು ಬಿಡುಗಡೆ ಮಾಡದೇ ಇನ್ನು ಎರಡು ತಿಂಗಳಲ್ಲಿ ಹಣವನ್ನು ಹೇಗೆ ಖರ್ಚು ಮಾಡುತ್ತೀರಿ? ನೀವು ಏನು ಹೇಳುತ್ತಿದ್ದೀರಿ, ಏನು ಮಾಡುತ್ತಿದ್ದಿರೆಂಬುದನ್ನು ರಾಜ್ಯದ ಜನತೆ ನೋಡುತ್ತಿದ್ದಾರೆ. ಇನ್ನು 2 ತಿಂಗಳುಗಳಲ್ಲಿ 2,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಆಗುತ್ತದಾ? ಇದರಿಂದ ಈ ಪರಿಶಿಷ್ಟ ಜಾತಿಯವರಿಗೆ ಬಹಳ ಅನ್ಯಾಯವಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :- ಸನ್ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಂಥ ಅಂಕಿ ಸಂಖ್ಯೆಗಳ ಪ್ರಕಾರ 2008-09ರಲ್ಲಿ 3,232 ಕೋಟಿ ರೂಪಾಯಿಗಳನ್ನು ನಿಗದಿ ಮಾಡಲಾಗಿದೆ. ಆದರೆ ಅದರಲ್ಲಿ ಖರ್ಚಾಗಿದ್ದು 811 ಕೋಟಿ ರೂಪಾಯಿಗಳು ಮಾತ್ರ. ಅಂದರೆ ಕೇವಲ ಸುಮಾರು 25%ನಷ್ಟು ಮಾತ್ರ ಹಣ ಬಿಡುಗಡೆಯಾಗಿದೆ. ಖರ್ಚಾಗಿದ್ದು ಅದಕ್ಕಿಂತಲೂ ಇನ್ನೂ ಕಡಿಮೆ. ಅಷ್ಟೇ ಖರ್ಚಾಗಿದೆ ಎಂದು ತೋರಿಸಿದ್ದೀರಿ, ಅದರ reality ನೋಡಬೇಕು. Actual expenditure ಎಷ್ಟಾಗಿದೆ ಎನ್ನುವುದನ್ನು ಈ ಸದನದ ಮುಂದೆ ಇಟ್ಟರೆ ಗೊತ್ತಾಗುತ್ತದೆ. ತಾವೇ ನೋಡಿ, $1/4^{th}$ ನಷ್ಟು ಹಣವನ್ನು ಮಾತ್ರ ಬಿಡುಗಡೆ ಮಾಡಿದ್ದೀರಿ. ಇನ್ನೂ $3/4^{th}$ ನಷ್ಟು ಹಣವನ್ನು ಮುಂದಿನ ಫೆಬ್ರವರಿ, ಮಾರ್ಚ್ ತಿಂಗಳುಗಳಲ್ಲಿ ಅಂದರೆ ಕೇವಲ 60 ದಿವಸಗಳಲ್ಲಿ ಖರ್ಚು ಮಾಡುವುದಕ್ಕೆ

ಸಾಧ್ಯವೇ? ಇಟ್ಟಂಥ ಹಣವನ್ನು ಬಿಡುಗಡೆ ಮಾಡುವುದಕ್ಕೆ ತೊಂದರೆ ಏನಿತ್ತು? ಏಕೆ ಖರ್ಚಾಗಲಿಲ್ಲ ಎನ್ನುವುದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಸುಮ್ಮನೆ, ಶೆಡ್ಯೂಲ್ಡ್ ಕ್ಯಾಸ್ಟ್ ಜನರಿಗೆ ನಾವು ಇಷ್ಟೊಂದು ಕೊಟ್ಟಿದ್ದೇವೆ ಎಂದು ಹೇಳುವುದು, provision ಮಾಡುವುದು ಅಷ್ಟೇ ಆಗುತ್ತದೆ. ಆದರೆ ನೀವು ಹಣವನ್ನೇ ಬಿಡುಗಡೆ ಮಾಡದೇ ಹೋದರೆ, ಖರ್ಚಾಗದೇ ಹೋದರೆ, ಬಜೆಟ್‌ನಲ್ಲಿ ಇಟ್ಟ ಮಾತ್ರಕ್ಕೆ ಅವರ ಉದ್ಧಾರವಾಗುತ್ತದೆಯೇ? ಅದರ ಜೊತೆಯಲ್ಲಿ, ನೀವು execute ಮಾಡಿ, ಖರ್ಚು ಮಾಡಿ, ಹಣವನ್ನು ಯಾವುದಕ್ಕಾಗಿ ಅನುಷ್ಠಾನ ಮಾಡಬೇಕೆಂದು ಇಟ್ಟಿದ್ದಿರೋ ಅದನ್ನು ಅನುಷ್ಠಾನ ಮಾಡಿದರೆ ಮಾತ್ರ ಇದು ಸಾಧ್ಯ. ಆದ್ದರಿಂದ ದಯವಿಟ್ಟು ನನಗೆ ತಿಳಿಸಬೇಕು, ಉಳಿದ ಹಣವನ್ನು ಹೇಗೆ ಬಿಡುಗಡೆ ಮಾಡುವುದಕ್ಕೆ ಆಗುತ್ತದೆ, ಖರ್ಚು ಮಾಡುವುದಕ್ಕೆ ಏನು ತೊಂದರೆಯಾಯಿತು ಎನ್ನುವುದನ್ನು ತಾವು ಸ್ಪಷ್ಟಪಡಿಸಿದರೆ, ಸರ್ಕಾರ ಇದರಲ್ಲಿ ಎಷ್ಟರ ಮಟ್ಟಿಗೆ ಆಸಕ್ತಿಯನ್ನು ವಹಿಸಿ ಕೆಲಸ ಮಾಡಿದೆ ಎನ್ನುವುದು ನಮಗೆ ಗೊತ್ತಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, ಈ ವರ್ಷ ಮೊದಲ ಬಾರಿಗೆ population ಆಧಾರದ ಮೇಲೆ ಅನುದಾನವನ್ನು ನಿಗದಿಪಡಿಸಿದ್ದೇವೆ. ಈ ಹಿಂದೆ ಈ ರೀತಿ ಆಗುತ್ತಿರಲಿಲ್ಲ. ಈಗಾಗಲೇ ಈ ವರ್ಷ 3-4 ಸಲ High Power Committee meeting ಆಗಿದೆ. Additional Chief Secretary ಯವರು ಅವರ Chairmanshipನಲ್ಲಿ ಈ meetingಗಳನ್ನು ಮಾಡಿದ್ದಾರೆ. ಮಂತ್ರಿಗಳೂ ಸಹ regular ಆಗಿ ಕೆಲಸವನ್ನು ಮಾಡುತ್ತಿದ್ದಾರೆ. ಯೋಜನಾ ಆಯೋಗ ಹೇಳಿದ್ದನ್ನು, ನಿಗದಿ ಮಾಡಿದ್ದನ್ನು fulfill ಮಾಡುವಂಥಾದ್ದು ಮೊದಲ ಬಾರಿಗೆ ಆಗಿದೆ. SCP ಹಣವನ್ನು ಖರ್ಚು ಮಾಡದೇ ಇದ್ದಲ್ಲಿ, ಆ ಹಣವನ್ನು pool ಮಾಡಿ ಆ ವರ್ಗಗಳಿಗೆ ಖರ್ಚು ಮಾಡಲಾಗುತ್ತದೆ. ಇದರಿಂದ SCP pooled funds ಹೆಚ್ಚಾಗುತ್ತದೆಯೇ ಹೊರತು ಏನೂ ಅನಾಹುತ ಆಗುವುದಿಲ್ಲ. ಎರಡನೆಯದು, ಹೋದ ವರ್ಷಕ್ಕೆ ಹೋಲಿಸಿದರೆ, ಶೆಡ್ಯೂಲ್ಡ್ ಕ್ಯಾಸ್ಟ್‌ಗೆ 318 ಕೋಟಿ ರೂಪಾಯಿಗಳಷ್ಟು ಹೆಚ್ಚು, ಶೆಡ್ಯೂಲ್ಡ್ ಟ್ರೈಬ್‌ಗೆ 103 ಕೋಟಿ ರೂಪಾಯಿಗಳಷ್ಟು ಹೆಚ್ಚು ಅನುದಾನವನ್ನು ಮಾಡಿದ್ದೇವೆ. ಈ ವರ್ಷ ಹಣವನ್ನು ಪೂರ್ತಿ ಬಿಡುಗಡೆ ಮಾಡುತ್ತೇವೆ. ಬಜೆಡ್ ಮಂಡನೆ ಮಾಡಿದ್ದು ತಡವಾದಂಥಾದ್ದು, ರಾಷ್ಟ್ರಪತಿ ಆಳ್ವಿಕೆ ಮೊದಲು ಇದ್ದಂಥಾದ್ದು, ಈ ಎಲ್ಲ ಹಿನ್ನಲೆಯಲ್ಲಿ ನಿರೀಕ್ಷೆಯಂತೆ ಹಣ ಖರ್ಚಾಗಿಲ್ಲ.

ಆ ಕಡೆ war foot ನಲ್ಲಿ ಕೆಲಸ ಮಾಡಲು ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇನೆ, review ಮಾಡಿದ್ದೇನೆ. ತಾವು ಒಂದು ಅಂಶವನ್ನು ಗಮನಿಸಬೇಕು. 2007-08ರಲ್ಲಿ ಡಿಸೆಂಬರ್ ಕೊನೆಯವರೆಗೆ ಆದಂಥ ಅಂಕಿ ಅಂಶಗಳನ್ನು ನಾನು ಕೊಟ್ಟಿದ್ದೇನೆ. 2007-08ರಲ್ಲಿ, 2914 ಕೋಟಿ, 67 ಲಕ್ಷ, 79 ಸಾವಿರ ರೂಪಾಯಿಗಳಲ್ಲಿ ಖರ್ಚಾಗಿರುವಂಥಾದ್ದು 1982 ಕೋಟಿ 61 ಲಕ್ಷ 90 ಸಾವಿರ ರೂಪಾಯಿಗಳು ಮಾತ್ರ. ಇನ್ನೂ 932 ಕೋಟಿ 5 ಲಕ್ಷ 89 ಸಾವಿರ ರೂಪಾಯಿಗಳು ಖರ್ಚಾಗಲೇ ಇಲ್ಲ. 2008-09ರಲ್ಲಿ, ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ 25% ಅಂದರೆ 811 ಕೋಟಿ 28 ಲಕ್ಷ 30 ಸಾವಿರ ರೂಪಾಯಿಗಳು ಖರ್ಚಾಗಿದೆ. ಉಳಿದ ಹಣವನ್ನು ಬಿಡುಗಡೆ ಮಾಡಿ, ಖರ್ಚು ಮಾಡುವುದಕ್ಕೆ ನಾವು ನಮ್ಮ ಶಕ್ತಿ ಮೀರಿ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ. ಅದೇ ರೀತಿ, ಪರಿಶಿಷ್ಟ ಪಂಗಡದಲ್ಲಿ 2007-08ನೇ ಸಾಲಿನಲ್ಲಿ 1,160 ಕೋಟಿ 87 ಲಕ್ಷ 63 ಸಾವಿರ ರೂಪಾಯಿಗಳ ಅನುದಾನದಲ್ಲಿ 796 ಕೋಟಿ 5 ಲಕ್ಷ 33 ಸಾವಿರ ರೂಪಾಯಿಗಳು ಖರ್ಚಾಗಿದೆ. ಆದರೆ ನಾವು ಈ ಬಾರಿ 1,263 ಕೋಟಿ 89 ಲಕ್ಷ 8 ಸಾವಿರ ರೂಪಾಯಿಗಳ ಅನುದಾನದಲ್ಲಿ 350 ಕೋಟಿ 60 ಲಕ್ಷ 48 ಸಾವಿರ ರೂಪಾಯಿಗಳು ಖರ್ಚಾಗಿದೆ. ಮುಂದೆ ಬರುವ 3 ತಿಂಗಳಲ್ಲಿ ಇದನ್ನು speed up ಮಾಡುತ್ತೇವೆ. ಎಲ್ಲ ಇಲಾಖೆ ಗಳಲ್ಲಿ ವಿಶೇಷವಾದ ಗಮನವನ್ನು ಕೊಟ್ಟು review ಮಾಡಿ, ಹೆಚ್ಚು ಹಣವನ್ನು ಆ ಸಮೂಹಕ್ಕೆ ಖರ್ಚು ಮಾಡುವಂಥ ಒಂದು ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡುತ್ತೇವೆ. ಈ ವರ್ಷ ಕಡಿಮೆ ಖರ್ಚಾಗಲು ಕಾರಣಗಳೇನು ಎನ್ನುವುದು ನಿಮಗೇ ಗೊತ್ತಿದೆ. ಈ ಮಧ್ಯದಲ್ಲಿ 6-7 ಜಿಲ್ಲೆಗಳಲ್ಲಿ ಚುನಾವಣೆಯಾಯಿತು, ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಇತ್ತು, ಬಜೆಟ್ ಮಂಜೂರು ಮಾಡುವಂಥಾದ್ದು ತಡವಾಯಿತು. ಈ ಎಲ್ಲ ಕಾರಣಗಳಿಂದಾಗಿ ನಿರೀಕ್ಷೆಯಂತೆ ಖರ್ಚು ಮಾಡಲಾಗಲಿಲ್ಲ, ಇದು ನಮಗೆ ಸಮಾಧಾನಕರವಾಗಿಲ್ಲ. ಅದನ್ನು ಸರಿಪಡಿಸುವುದಕ್ಕೆ, ಹೆಚ್ಚು ಖರ್ಚು ಮಾಡುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತೇವೆ. S.C. ಜನಾಂಗಕ್ಕೆ ನಾನು ನಿಮಗೆ ಕೊಟ್ಟಿರುವ ಅಂಕಿಸಂಖ್ಯೆಗಳು ನವೆಂಬರ್ 2008ರವರೆಗೆ ಅಷ್ಟೇ. ಡಿಸೆಂಬರ್‌ನಲ್ಲಿ ಖರ್ಚು ಆದಂಥಾದ್ದಿದೆ. ಅದು ಇದರಲ್ಲಿ ಸೇರಿಲ್ಲ. ಪೂರ್ತಿ ಹಣವನ್ನು ಬಿಡುಗಡೆ ಮಾಡಿ, ಹೆಚ್ಚು ಹಣವನ್ನು ಖರ್ಚು ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ ಎನ್ನುವ ಭರವಸೆಯನ್ನು ಈ ಮನೆಯಲ್ಲಿ ನಮ್ಮ ಎಲ್ಲ ಸದಸ್ಯರಿಗೆ ಕೊಡುವುದಕ್ಕೆ ನಾನು ಇಚ್ಛೆ ಪಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ಇಲ್ಲಿಂದ ತಪ್ಪು ಮಾಹಿತಿ ಹೋಗಬಾರದು. ಮೊದಲನೇ ಸಲ ನಮ್ಮ ಸರ್ಕಾರ population based grant ಕೊಟ್ಟಿದೆ, ಹಿಂದೆ ಕೊಟ್ಟಿಲ್ಲ ಎನ್ನುವಂಥ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಿದ್ದಾರೆ, ಇದು ಸರಿಯಲ್ಲ. ಈಗ Planning Commission ನವರೇ insist ಮಾಡುತ್ತಿದ್ದಾರೆ. ಒಂದು ವೇಳೆ ನೀವು ಅವರಿಗೆ population based grant reserve ಮಾಡದೇ ಹೋದರೆ, ಕೊಡದೇ ಹೋದರೆ, ನಿಮ್ಮ plan approve ಮಾಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಹಾಗಾಗಿ ಮೇಲಿನ ಒತ್ತಡದಿಂದ ಇವತ್ತು ಇದು ಅನಿವಾರ್ಯವಾಗಿ ಬಂದಿದೆಯೇ ಹೊರತಾಗಿ ಯಾರ ಮೆಹರ್ಬಾನಿಯಿಂದ ಅಲ್ಲ, ಇದು ಒಂದು. ಇಷ್ಟೊಂದು ಒತ್ತಡ ಇದ್ದರೂ ಕೂಡ, ನಾವು 25% ಮಾಡಿದ್ದೇವೆ ಎಂದು ಹೇಳುತ್ತಿದ್ದೀರಿ. Alright, ತಾವು ಬಂದು ಏಳು ತಿಂಗಳಾಯಿತು, ಬಿಟ್ಟುಬಿಡಿ ಅದನ್ನು. ಹಿಂದೆ ಏನಾಗಿತ್ತು ಎನ್ನುವುದನ್ನು ನಾವು ಬಿಟ್ಟುಬಿಡೋಣ. ಹಿಂದಿನವರು ತಪ್ಪು ಮಾಡಿದರು ಎಂದು ತಿಳಿದುಕೊಳ್ಳಿ. ಅದನ್ನು ಬಿಟ್ಟು ನೀವು ಹಿಂದಿನವರು ಹೀಗೆ ಮಾಡಿದರು ಎನ್ನುವುದನ್ನೇ ಹೇಳಿಕೊಂಡು, ಹತ್ತಾರು ತಿಂಗಳು ಅದನ್ನೇ ಸಮರ್ಥನೆ ಮಾಡಿಕೊಂಡು ಹೋಗುವುದಕ್ಕಾಗುವುದಿಲ್ಲ. ತಾವು ಬಂದ ಏಳು ತಿಂಗಳುಗಳಲ್ಲಿ, ಪ್ರತಿ ತಿಂಗಳೂ review ಮಾಡಿ ಖರ್ಚು ಮಾಡಬಹುದಾಗಿತ್ತು. ಮುಂದಿನ ಎರಡು ತಿಂಗಳುಗಳಲ್ಲಿ ನಾನು ಮಾಡುತ್ತೇನೆ ಎನ್ನುವ ಮನಸ್ಸನ್ನು ನೀವು ಈಗ ತೋರಿಸಿರುವಾಗ, ಕಳೆದ ಏಳು ತಿಂಗಳಲ್ಲಿ ಅದು ಏಕೆ ಸಾಧ್ಯವಿರಲಿಲ್ಲ? ಅದಕ್ಕಾಗಿ ದಯವಿಟ್ಟು ಇದರ ಬಗ್ಗೆ special review ಮಾಡತಕ್ಕಂಥಾದ್ದನ್ನು ಮಾಡಿ. ಇದು lapse ಆಗುವುದಿಲ್ಲ. ಅದು ನನಗೂ ಗೊತ್ತಿದೆ. ಏಕೆಂದರೆ, Planning Commission ನವರು condition ಹಾಕಿದ್ದಾರೆ, ಒಂದು ವೇಳೆ ಆ ವರ್ಷದಲ್ಲಿ ಖರ್ಚಾಗದಿದ್ದರೆ carry on ಮಾಡಬೇಕು ಎಂದು ಹೇಳಿದ್ದಾರೆ. So, carry on ಆಗುತ್ತದೆ. That is one. ಆದರೆ ಹೀಗೇ ನಾವು ಕೋಟಿಗಟ್ಟಲೆ accumulated ಮಾಡಿಕೊಳ್ಳುತ್ತಾ ಹೋದರೆ ಅವರನ್ನು ಉದ್ಧಾರ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ, ದಯವಿಟ್ಟು ತಾವು ಇದನ್ನು month wise review ಮಾಡಿ, month wise allocation ಅನ್ನೂ release ಮಾಡಬೇಕು. ಅನೇಕ ಸಾರಿ ತಾವು

ಬಜೆಟ್‌ನಲ್ಲಿ ತೋರಿಸುತ್ತೀರಿ, ಆದರೆ ಬಿಡುಗಡೆ ಮಾಡುವುದೇ ಒಂದು. ಆಮೇಲೆ LOC ಗೋಸ್ಕರವೂ ಅಡ್ಡಾಡಬೇಕು. ಅಧ್ಯಕ್ಷರೇ, ಇದು ತಮಗೂ ಗೊತ್ತಿದೆ, ಇದರ ಅನುಭವ ತಮಗೂ ಕೂಡ ಇದೆ. ಹೌದಲ್ಲವೇ?

ಅಧ್ಯಕ್ಷರು :- ನಾನು ಒಪ್ಪುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- LOCಗೂ ಓಡಾಡಬೇಕು, ಅದಕ್ಕೂ percentage ಕೊಡಬೇಕು, ಆ percentage ಕೊಟ್ಟರೆ ಮಾತ್ರ LOC ಬಿಡುಗಡೆಯಾಗುತ್ತದೆಯೋ ಹೊರತಾಗಿ ಇಲ್ಲದಿದ್ದರೆ ಇದು ಆಗುವುದಿಲ್ಲ. ಅದಕ್ಕಾಗಿ ಖುದ್ದಾಗಿ ನೀವು ಇದನ್ನು review ಮಾಡಿ, ಯಾರು ತಪ್ಪು ಮಾಡುತ್ತಾರೋ ಅವರಿಗೆ ಶಿಕ್ಷೆ ಕೊಡಿ. ಜಿಲ್ಲಾವಾರು ನಿಮ್ಮ ಮಂತ್ರಿಗಳೂ ಇದ್ದಾರೆ, ನೀವು KDP meetingನಲ್ಲಿ ಇದನ್ನು special ಆಗಿ review ಮಾಡಬೇಕು ಎಂದು ಅವರಿಗೂ ಹೇಳಬೇಕು. ಯಾರು ಹಿಂದೇಟು ಹಾಕುತ್ತಾರೆ, at least ಅಂಥವರ ಮೇಲೆ ನೀವು ಕ್ರಮ ಜರುಗಿಸಿ. ಈಗ 5-6 ಜನ ಬಂದಿದ್ದಾರೆ, ನಿಮ್ಮ quota ಭರ್ತಿಯಾಗಿದೆ. ಆದ್ದರಿಂದ, ಈಗಲಾದರೂ ನೀವು ಹೆದರಬೇಡಿ, ಹೇಳಿದ್ದಕ್ಕೆಲ್ಲಾ Yes ಎನ್ನುತ್ತಾ ಹೋಗಬೇಡಿ.

ಶ್ರೀ ಆರ್. ಧ್ರುವನಾರಾಯಣ್ (ಕೊಳ್ಳೇಗಾಲ) :- ಮಾನ್ಯ ಅಧ್ಯಕ್ಷರೇ, ನಾನು ಮುಖ್ಯಮಂತ್ರಿಗಳ ಹತ್ತಿರ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮಹಾರಾಷ್ಟ್ರದಲ್ಲಿ ಸಮಾಜ ಕಲ್ಯಾಣ ಇಲಾಖೆಯವರೇ complete review ಮಾಡತಕ್ಕಂಥ Single Window System ಇದೆ. ಹಾಗಾಗಿ ಅಲ್ಲಿ ಈ ಒಂದು ಹಣ ಸದ್ಬಳಕೆ ಆಗುತ್ತಿದೆ. ದಯಮಾಡಿ ಇಲ್ಲೂ ಕೂಡ ಆ ರೀತಿ ಮಾಡಿ. ಏಕೆಂದರೆ, ಹಲವಾರು ಇಲಾಖೆಗಳಲ್ಲಿ ಇದು ಸರಿಯಾದ ರೀತಿಯಲ್ಲಿ ವಿನಿಯೋಗ ಆಗಿಲ್ಲ. ಉದಾಹರಣೆಗೆ, ಲೋಕೋಪಯೋಗಿ ಇಲಾಖೆಯಲ್ಲಿ 15% ನಷ್ಟು ಹಣ ಕೂಡ ವಿನಿಯೋಗ ಆಗಿಲ್ಲ. ಬಹಳಷ್ಟು ಇಲಾಖೆಗಳಲ್ಲಿ ಈ ಹಣ ಸದ್ಬಳಕೆಯಾಗಿಲ್ಲ. ಆದ್ದರಿಂದ ಒಂದು ಇಲಾಖೆಯವರೇ ಇದರ ಜವಾಬ್ದಾರಿಯನ್ನು ಹೊತ್ತುಕೊಂಡು ಬಳಕೆ ಮಾಡುವಂತಾಗಬೇಕು. ಉದಾಹರಣೆಗೆ, ಸಮಾಜ ಕಲ್ಯಾಣ ಇಲಾಖೆಯವರೇ complete ಈ ಹಣವನ್ನು pool ಮಾಡಿಕೊಂಡು, ಅವರ ಮುಖಾಂತರ ಇದು ಸದ್ಬಳಕೆಯಾದರೆ, ಮಹಾರಾಷ್ಟ್ರದಲ್ಲಿ ನಡೆದಂತೆ ನಡೆದರೆ ಇಲ್ಲಿ ಕೂಡ ಸದ್ಬಳಕೆಯಾಗುತ್ತದೆ. ಆ ರೀತಿ ಮಾಡಬೇಕು ಎನ್ನುವ ಮನವಿಯನ್ನು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮಾಡುತ್ತೇನೆ. ಇದರ ಜೊತೆಗೆ, ಈ ವರ್ಷ ತಾವು ಇನ್ನೂ

ಸುಮಾರು 2,421 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿದೆ. ನೀವು ಬಿಡುಗಡೆ ಮಾಡಿರುವುದು ಬರೀ 811 ಕೋಟಿ ರೂಪಾಯಿಗಳನ್ನು ಮಾತ್ರ. ನಿಗದಿಪಡಿಸಿರತಕ್ಕಂಥಾದ್ದು 3,232 ಕೋಟಿ. ಅದರಲ್ಲಿ ಇದುವರೆಗೆ ತಾವು ಬಿಡುಗಡೆ ಮಾಡಿರುವುದು ಬರೀ 811 ಕೋಟಿ ರೂಪಾಯಿಗಳು. ಇನ್ನೂ 2,421 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿದ್ದು, ದಯವಿಟ್ಟು ತಕ್ಷಣ ತಾವು ಹಣವನ್ನು ಬಿಡುಗಡೆ ಮಾಡಬೇಕು ಎಂದು ನಾನು ಮನವಿ ಮಾಡುತ್ತೇನೆ.

ಡಾ॥ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) :- ಪ್ರತಿಪಕ್ಷದ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಇತರೆ ಸದಸ್ಯರು ಹೇಳಿದಂಥ ಸಲಹೆಗಳೇನಿವೆ ಅವುಗಳನ್ನು ನಾನು ಒಪ್ಪಿಕೊಳ್ಳುತ್ತೇನೆ. ಪ್ರತಿ ತಿಂಗಳು ಹಣ ಬಿಡುಗಡೆ ಮಾಡುವಂಥದ್ದು, ಪ್ರತಿ ತಿಂಗಳು ಪ್ರಗತಿ ಪರಿಶೀಲನೆ ಮಾಡುವಂಥದ್ದು, ಫೆಬ್ರವರಿ ಮೊದಲನೇ ವಾರದಲ್ಲಿಯೇ ಡಿಸೆಂಬರ್ ಕೊನೆಯವರೆಗೆ ಏನಾಗಿದೆ, ಏನಾಗಬೇಕೆನ್ನುವುದನ್ನು ಕುಳಿತು ಮರು ಪರಿಶೀಲನೆ ಮಾಡಿ, review ಮಾಡಿ, ಇದಕ್ಕೆ ಆದ್ಯತೆ ಕೊಟ್ಟು ಜಿಲ್ಲಾ ಉಸ್ತುವಾರಿ ಸಚಿವರಿಗೆ ಸೂಚನೆ ಕೊಟ್ಟು, ಪ್ರತಿಯೊಂದು ಜಿಲ್ಲೆಯಲ್ಲಿ SC/ST ಗೆ ಇಟ್ಟಿರುವ ಹಣದಲ್ಲಿ ಎಷ್ಟು ಖರ್ಚಾಗಿದೆ, ಖರ್ಚಾಗದಿದ್ದರೆ ತಡವಾಗಿರುವುದಕ್ಕೆ ಕಾರಣವೇನು ಮತ್ತು ಅದನ್ನು warfooting ನಲ್ಲಿ ಕೆಲಸ ಮಾಡಬೇಕೆನ್ನುವ ಸೂಚನೆ ಕೊಡುತ್ತೇನೆ. ಆ ಕಡೆಗೆ ಗಮನವನ್ನು ನಾನು ಕೊಡುತ್ತೇನೆ.

ಇ) ವಿಷಯ :- ಬಿಜಾಪುರ ಜಿಲ್ಲೆಯ ಚಿಮ್ಮಲಗಿ, ಮುಳವಾಡ ಹಾಗೂ ಇಂಡಿ ಏತ ನೀರಾವರಿ ನೀರಾವರಿ ಹಾಗೂ ಕುಡಿಯುವ ನೀರಿನ ತೊಂದರೆ ಕುರಿತು.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) (ದೇವರ ಹಿಪ್ಪರಗಿ) :- ಮಾನ್ಯ ಅಧ್ಯಕ್ಷರೆ, ಬಿಜಾಪುರ ಜಿಲ್ಲೆಯ ಚಿಮ್ಮಲಗಿ, ಮುಳವಾಡ ಹಾಗೂ ಇಂಡಿ ಏತ ನೀರಾವರಿ ಯೋಜನೆಗಳ ಕಾರ್ಯ ಪೂರ್ಣಗೊಳ್ಳದೆ ಇರುವುದು ಹಾಗೂ ಜಿಲ್ಲೆಯು ಸತತ ಬರಗಾಲಕ್ಕೆ ತುತ್ತಾಗಿ ರೈತರಿಗೆ, ಜನ ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗುತ್ತಿರುವ ಬಗ್ಗೆ ಮಾನ್ಯ ಜಲಸಂಪನ್ಮೂಲ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :- ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಈ ಕೆಳಕಂಡ ಹೇಳಿಕೆಯನ್ನು ನೀಡುತ್ತದೆ.